ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಮೂರನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001.
E-mail ID: icpssarakar@gmail.com Phone No.080-22867381.

ಸಂಖ್ಯೆ: ಐಸಿಪಿಎಸ್/ಸಾರಾ–13/ಬಾಲ ಸೇವಾ/2021–22 ದಿನಾಂಕ: 22–07–2021.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಗದಗ,

ಮಾನ್ಯರೇ,

ವಿಷಯ: "ಮುಖ್ಯಮಂತ್ರಿ ಬಾಲ ಸೇವಾ ಯೋಜನೆ"ಯಡಿ ಫಲನಾಭವಿಗಳನ್ನು ಪರಿಗಣಿಸುವ ಕುರಿತು ಮಾರ್ಗದರ್ಶನ ನೀಡುವ ಬಗ್ಗೆ.

ಉಲ್ಲೇಖ: ತಮ್ಮ ಕಛೇರಿಯ ಪತ್ರ ಸಂಖ್ಯೆ: ಜಿಮರಅ/ಜಿಮರಘಗ/ಕೋವಿಡ್–19/ಶು.ಮಾ /2021–22, ದಿ: 16.07.2021.

* * *

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ, ಕೋವಿಡ್–19 ರ ಕಾರಣಗಳಿಂದ ಪೋಷಕರಿಬ್ಬರನ್ನು ಕಳೆದುಕೊಂಡ 18 ವರ್ಷದೊಳಗಿನ ಒಂದೇ ಕುಟುಂಬದ ಎಷ್ಟು ಮಕ್ಕಳನ್ನು "ಮುಖ್ಯಮಂತ್ರಿ ಬಾಲ ಸೇವಾ ಯೋಜನೆ"ಯಡಿ ಪರಿಗಣಿಸಬೇಕೆಂಬ ಕುರಿತು ಮಾರ್ಗದರ್ಶನ ಕೋರಿರುವುದು ಸರಿಯಷ್ಟೆ.

ಈ ನಿಟ್ಟಿನಲ್ಲಿ ವಿಷಯದ ಕುರಿತು ಸ್ಪಷ್ಟಪಡಿಸುವುದೇನೆಂದರೆ, ಕೋವಿಡ್–19ರ ಕಾರಣಗಳಿಂದ ಪೋಷಕರಿಬ್ಬರನ್ನೂ ಕಳೆದುಕೊಂಡಂತಹ ಹಾಗೂ ಎರಡನೇ ಪೋಷಕರು ತೀರಿಕೊಂಡ ದಿನಾಂಕಕ್ಕೆ ಅನ್ವಯಿಸುವಂತೆ, 18 ವರ್ಷದೊಳಗಿನ ವಯೋಮಾನದ ಒಂದು ಕುಟುಂಬದಲ್ಲಿನ ಒಡಹುಟ್ಟಿದ ಎಲ್ಲಾ ಮಕ್ಕಳನ್ನು "ಮುಖ್ಯಮಂತ್ರಿ ಬಾಲ ಸೇವಾ ಯೋಜನೆ"ಯಡಿ ಪರಿಗಣಿಸಿ, ಈ ಯೋಜನಾ ಸೌಲಭ್ಯವನ್ನು ಒದಗಿಸಲು ಅಗತ್ಯ ಕ್ರಮವಹಿಸುವಂತೆ ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,

22.07.2021
ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು.

ಪ್ರತಿಯನ್ನು: ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

D\Shobha\Letters Sup